ದಿನಾಂಕ 17-08-2023 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ಪ್ರತಿವಾದಿಗಳ ಪರ ಶ್ರೀ ಎಮ್ ಬಿ ಪಿ ವಕೀಲರಿಂದ .

ನಾನು ಶಿವಪುರ ಗ್ರಾಮದಲ್ಲಿ ಇರುತ್ತೇನೆ. ನನ್ನ ತವರು ಮನೆಯೂ ಸಹ ಶಿವಪುರ ಗ್ರಾಮ ಆಗಿರುತ್ತದೆ. ನಮಗೆ 6 ಎಕರೆ 8 ಗಂಟೆ ಜಮೀನಿನಲ್ಲಿಯ ಆಸ್ತಿ ಬೇಕೆಂದು ಈ ದಾವೆ ಸಲ್ಲಿಸಿದ್ದೇವೆ. ನಾನು ಮತ್ತು ನನ್ನ ತಂಗಿಯಾದ ಗಂಗವ್ವ ಸೇರಿ ಈ ದಾವೆ ಸಲ್ಲಿಸಿದ್ದೇವೆ. ನಾನು ಮತ್ತು 2 ನೇ ವಾದಿ ಮೇಲೆ ಹೇಳಿದ ಜಮೀನಿನಲ್ಲಿ ಪಾಲು ಬೇಕೆಂದು ಈ ದಾವೆ ಸಲ್ಲಿಸಿದ್ದೇವೆ.

ಎಷ್ಟು ಆಸ್ತಿಗಳಲ್ಲಿ ಪಾಲು ಬೇಕೆಂದು ದಾವೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ 6 ಎಕರೆ 8 ಗುಂಟೆ ಜಮೀನಿನಲ್ಲಿ ಪಾಲು ಬೇಕೆಂದು ಈ ದಾವೆ ಸಲ್ಲಿಸಿದ್ದೇವೆ ಎನ್ನುತ್ತಾರೆ. ಸದರಿ ಜಮೀನಿನ ಸರ್ವೇ ನಂಬರ 151 ಆಗಿರುತ್ತದೆ. ನಾನು ಮತ್ತು 2 ನೇ ವಾದಿ ಸದರಿ 6 ಎಕಟೆ 8 ಗುಂಟೆ ಜಮೀನಿನಲ್ಲಿ ಪಾಲು ಬೇಕೆಂದು ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ.

ನನ್ನ ಚಿಕ್ಕಪ್ಪನ ಮಕ್ಕಳ ವಿರುದ್ಧ ಈ ದಾವೆ ಸಲ್ಲಿಸಿದ್ದೇವೆ. ನನಗೆ 3 ಜನ ಚಿಕ್ಕಪ್ಪಂದಿರು. ನನ್ನ ತಂದೆಯ ಹೆಸರು ಕಾಳಪ್ಪ ಎಂದರೆ ಸರಿ. ನಿಮ್ಮ ವಾದ ಪತ್ರದಲ್ಲಿ ನನ್ನ ತಂದೆಗೆ ಎಷ್ಟು ಸಹೋದರರು ಎನ್ನುವುದನ್ನು ಬರೆದಿಲ್ಲ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. ಕೇದಾರಪ್ಪ ಮತ್ತು ಹನುಮಂತ ರವರು ನನ್ನ ಚಿಕ್ಕಪ್ಪಂದಿರು ಎಂದರೆ ಸರಿ. ಪ್ರತಿವಾದಿ ನಂಬರ 6 ರಿಂದ 9 ರವರು ನನ್ನ ಚಿಕ್ಕಪ್ಪಂದಿರ ಮಕ್ಕಳು ಎಂದರೆ ಸರಿ. ನನ್ನ ತಂದೆ ನನ್ನ ಅಜ್ಜನಿಗೆ ಹಿರಿ ಮಗ ಎಂದರೆ ಸರಿ. ಅದೇ ರೀತಿ ನನ್ನ ತಾಯಿ ಹಿರಿ ಸೊಸೆ ಎಂದರೆ ಸರಿ. ನೀವು ಮತ್ತು ನಿಮ್ಮ ಚಿಕ್ಕಪ್ಪಂದಿರ ಮಕ್ಕಳು ಶಿವಪುರ ಗ್ರಾಮದಲ್ಲಿ ಇರುತ್ತೀರಿ ಎಂದರೆ ಸಾಕ್ಷಿ ತಾನು ಶಿವಪುರ ಗ್ರಾಮದಲ್ಲಿ ಹಾಗೂ ತನ್ನ ಚಿಕ್ಕಪ್ಪಂದಿರ ಮಕ್ಕಳು ಹುಲಕೊಪ್ಪ ಗ್ರಾಮದಲ್ಲಿ ಇರುತ್ತೇವೆ ಎನ್ನುತ್ತಾರೆ. ದಾವಾ ಆಸ್ತಿಗಳು ಹುಲಕೊಪ್ಪ ಗ್ರಾಮದಲ್ಲಿ ಇವೆ ಎಂದರೆ ಸರಿಯಲ್ಲ. ನಮ್ಮ ತಂದೆ ತೀರಿಕೊಂಡ ನಂತರವೂ ಸಹ ನಾವು ಮತ್ತು ಪ್ರತಿವಾದಿಗಳು ಕೂಡಿಯೇ ಇದ್ದೇವು ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನನ್ನ ಚಿಕ್ಕಪ್ಪಂದಿರ ಮಕ್ಕಳು ಮಾತ್ರ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ತೀಕೊಂಡ ನಂತರ ದಾವಾ ಆಸ್ತಿಗಳನ್ನು ನನ್ನ ಚಿಕ್ಕಪ್ಪಂದಿರ ಮಕ್ಕಳು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನೀನು ದಾವಾ ಆಸ್ತಿಗಳನ್ನು ಖುದ್ದಾಗಿ ಸಾಗುವಳಿ ಮಾಡುತ್ತೀಯಾ ಎಂದರೆ ತನ್ನ ತಂಗಿ ಅಂದರೆ 4 ನೇ ಪ್ರತಿವಾದಿ ಮಾಡುತ್ತಾಳೆ ಎನ್ನುತ್ತಾರೆ. 1 ನೇ ಪ್ರತಿವಾದಿ 4 ನೇ ಪ್ರತಿವಾದಿಯ ಜೊತೆ ಇರುತ್ತಾಳೆ ಎಂದರೆ ಸರಿ. 4 ನೇ ಪ್ರತಿವಾದಿಯೇ 1 ನೇ ಪ್ರತಿವಾದಿಯ ಆರೈಕೆ ಮಾಡುತ್ತಿದ್ದಾಳೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.